


International Journal of Kannada Research
www.kannadajournal.com

**ISSN: 2454–5813**
IJKR 2018; 4(2): 93-97
© 2018 IJKR
www.kannadajournal.com
Received: 20-02-2018
Accepted: 25-03-2018

**ಡಾ.ಎಸ್.ಕೆ.ದೇವೇಗೌಡ**
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು, ಮೈಸೂರು ಜಿಲ್ಲೆ, ಕರ್ನಾಟಕ ರಾಜ್ಯ, ಭಾರತ

**Correspondence**
**ಡಾ.ಎಸ್.ಕೆ.ದೇವೇಗೌಡ**
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು, ಮೈಸೂರು ಜಿಲ್ಲೆ, ಕರ್ನಾಟಕ ರಾಜ್ಯ, ಭಾರತ

# ವೈಷ್ಣವ ಪರಂಪರೆ – ಮಹಾವಿಷ್ಣುವಿನ ದಶಾವತಾರದ ನಂಬಿಕೆ ಕುರಿತ ವಿವರಣೆ

**ಡಾ.ಎಸ್.ಕೆ.ದೇವೇಗೌಡ**

**DOI:** https://doi.org/10.22271/24545813.2018.v4.i2b.886

**ಪೀಠಿಕೆ**

ಮಹಾವಿಷ್ಣುವಿನ ಅತಿ ಪ್ರಸಿದ್ಧವಾಗಿರುವಂತಹ ಅವತಾರಗಳನ್ನು ದಶಾವತಾರಗಳು ಎನ್ನಲಾಗುತ್ತದೆ. ಅಂದರೆ, ಈ ದಶಾವತಾರದ ಅರ್ಥವೇ ಹತ್ತು ಅವತಾರಗಳು ಎಂಬುದೇ ಆಗಿರುತ್ತದೆ. ಹಾಗಾಗಿಯೇ ಈ ಮಹಾವಿಷ್ಣುವಿನ ದಶಾವತಾರಗಳಲ್ಲಿ ಮೊದಲನೆಯ ನಾಲ್ಕು ಅವತಾರಗಳು ಕೃತಯುಗವನ್ನು ಅಥವಾ ಸತ್ಯಯುಗದಲ್ಲಿ ಸೃಷ್ಟಿಯಾಗುತ್ತವೆ. ಇವುಗಳು ವೈದಿಕ ಧರ್ಮದಲ್ಲಿನ ನಾಲ್ಕುಯುಗಗಳಲ್ಲಿ ಪ್ರಥಮದ್ದೇ ಆಗಿರುತ್ತದೆ. ಅನಂತರದಲ್ಲಿ ಮೂರು ಅವತಾರಗಳು ತೇತ್ರಾಯುಗದಲ್ಲಿ ಸೃಷ್ಟಿಗೊಳ್ಳುತ್ತವೆ. ಎಂಟನೇ ಅವತಾರವೂ ದ್ವಾಪರಯುಗದಲ್ಲಿ ಹಾಗೂ ಒಂಭತ್ತನೆಯ ಅವತಾರವೂ ಕಲಿಯುಗದಲ್ಲಿ ಹಾಗೂ ಹತ್ತನೆಯ ಅವತಾರವೂ ಕಲ್ಕಿ, ಇದು ಕಲಿಯುಗದ ಅಂತ್ಯದಲ್ಲಿ ಸಂಭವಿಸುವುದು ಎಂದು ನಂಬಲಾಗಿರುತ್ತದೆ. ಮಹಾವಿಷ್ಣುವೂ ಅಚಿಂತ್ಯಾತ್ಮಕವಾಗಿ ವೈಕುಂಠದಲ್ಲಿ ನೆಲೆಸಿರುತ್ತಾನೆ ಎಂಬುದು ವೈಷ್ಣವ ಪರಂಪರೆಯಲ್ಲಿನ ಅಚಲವಾದ ನಂಬಿಕೆಯೇ ಆಗಿರುತ್ತದೆ. ಆದರೂ ಭೂಲೋಕದಲ್ಲಿ ಏನಾದರೂ ಅಧರ್ಮವೂ ಸಂಭವಿಸಿ ತನ್ನ ಭಕ್ತಾಧಿಗಳಿಗೆ ಹಾನಿ ಉಂಟಾಗುತ್ತಿರುವಾಗ, ಭಕ್ತಾಧಿಗಳ ಅನುಗ್ರಹಕ್ಕಾಗಿ ಕಾಲಾನುಕ್ರಮದಲ್ಲಿ ಅವತರಿಸಿ ಬರುತ್ತಿದ್ದಾನೆ. ಅಧರ್ಮವನ್ನು ಅಳಿಸಿ ಸಧರ್ಮವನ್ನು ಪುನರುಜ್ಜೀವನಗೊಳಿಸಲು ಭಗವಂತನಾಗಿರುವ ಮಹಾವಿಷ್ಣುವೂ ಅವತರಿಸಿ ಬರುತ್ತಾನೆ ಎಂದು ಇಂದಿಗೂ ನಂಬಲಾಗಿದೆ. ಸಾಧು–ಸಂತರ ಪಂತ್ರಾಣಕ್ಕಾಗಿ ಹಾಗೂ ದುಷ್ಕರ್ಮಿಗಳ ವಿನಾಶಕ್ಕಾಗಿ ಬಹುಮುಖ್ಯ ಸಂಸ್ಥಾಪನಾರ್ಥವಾಗಿ ಯುಗ–ಯುಗದಲ್ಲಿಯೂ ಅವತರಿಸಿ ಮತ್ತೇ ಮತ್ತೇ ಬರುತ್ತಾನೆ.

ಮಹಾವಿಷ್ಣುವೂ ಅವತರಿಸಿ ಬಂದಿರುವ ದಶಾವತಾರಗಳನ್ನು ಈ ಕೆಳಗಿನಂತೆ ದಾಖಲಿಸಲಾಗಿದೆ. ಅವುಗಳೆಂದರೆ, ಮೊದಲನೆಯದು; ಮತ್ಸ್ಯಾವತಾರ – ಮೀನು, ಎರಡನೆಯದು; ಕೂರ್ಮಾವತಾರ – ಆಮೆ, ಮೂರನೆಯದು; ವರಾಹವತಾರ – ಹಂದಿ, ನಾಲ್ಕನೆಯದು; ನರಸಿಂಹಾವತಾರ – ಸಿಂಹ ಮತ್ತು ಮನುಷ್ಯ, ಐದನೆಯದು; ವಾಮನವತಾರ – ಕುಬ್ಜ ಮಾನವರೂಪ, ಆರನೆಯದು; ಪರಶುರಾಮಾವತಾರ – ಕೋಪಗೊಂಡ ವ್ಯಕ್ತಿ, ಏಳನೆಯದು; ರಾಮವತಾರ – ವೀರ ಅಥವಾ ಪರಿಪೂರ್ಣ ವ್ಯಕ್ತಿ, ಎಂಟನೆಯದು; ಕೃಷ್ಣಾವತಾರ – ದೈವಿಕ ರಾಜತಾಂತ್ರಿಕ ಮತ್ತು ರಾಜನೀತಿಜ್ಞ, ಒಂಭತ್ತನೆಯದು; ಬಲರಾಮವತಾರ ಮತ್ತು ಬುದ್ಧ – ಕೃಷ್ಣನ ಅಣ್ಣ ಅಥವಾ ಬೌದ್ಧಧರ್ಮ ಸ್ಥಾಪಕ ಮತ್ತು ಹತ್ತನೆಯದು; ಕಲ್ಕಿ ಅವತಾರ – ಇನ್ನೂ ಕಾಣಿಸಿಕೊಳ್ಳುವ ಪ್ರಬಲ ಯೋಧ ಎಂದು ಹೇಳಲಾಗುತ್ತದೆ.

ಈ ಮೇಲೆ ದಾಖಲೀಕರಿಸಿರುವಂತಹ ಮಹಾವಿಷ್ಣುವಿನ ದಶಾವತಾರಗಳನ್ನು ಈ ಮುಂದಿನಂತೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

**ಮತ್ಸ್ಯಾವತಾರ – ಮೀನಿನ ಅವತಾರ Matsya**: ಮತ್ಸವೆಂದರೆ; ಮೀನು. ವೈದಿಕ ದೇವರಲ್ಲಿ ಅಧಿದೇವತೆಯಾಗಿರುವ ಮಹಾವಿಷ್ಣುವೂ ಹತ್ತು ಅವತಾರಗಳನ್ನು ಅಥವಾ ದಶಾವತಾರಗಳಲ್ಲಿ ಹುಟ್ಟಿ ಬಂದು ಭೂಲೋಕದಲ್ಲಿ ಮಾನವ ಕುಲವನ್ನು ಕಾಲಾನುಕ್ರಮದಲ್ಲಿ ರಕ್ಷಿಸಿದ್ದಾನೆ ಎಂದು ನಂಬಲಾಗಿತ್ತು. ಅದರಲ್ಲಿ ಮೊದಲ ಅವತಾರ ಅಥವಾ ಹತ್ತು ಅವತಾರಗಳಲ್ಲಿ ಪ್ರಥಮ ಅವತಾರವೇ ಈ ಮತ್ಸ್ಯ

ಅವತಾರವಾಗಿದೆ. ಇದು ಅರ್ಧಭಾಗದ ರೂಪವು ಮನುಷ್ಯ ಹಾಗೂ ಇನ್ನಾರ್ಧ ಭಾಗವು ಮೀನಿನ ರೂಪವೇ ಆಗಿರುತ್ತದೆ. ಈ ಮತ್ಸ್ಯ ಅವತಾರದ ಮೂಲಕ ಮೊದಲ ಮಾನವ ಕುಲವನ್ನು ಸಮುದ್ರದ ಮಹಾಪ್ರಳಯದಿಂದ ರಕ್ಷಿಸಿರುವುದೇ ಆಗಿರುತ್ತದೆ ಎಂದು ವಿವರಿಸಲಾಗಿರುವುದನ್ನು ಹೆಚ್ಚು ವೈದಿಕ ಪರಂಪರೆಯಲ್ಲಿ ನಂಬಲಾಗಿರುತ್ತದೆ. ಈ ಅವತಾರದಲ್ಲಿ ಮತ್ಸ್ಯವನ್ನು ಒಂದು ದೈತ್ಯಮೀನಿನ ಮಾದರಿಯಲ್ಲಿ ಚಿತ್ರಿಸಬಹುದು ಅಥವಾ ಮಾನವನ ರೂಪದಲ್ಲಿ ಮೀನಿನ ಹಿಂಭಾಗದ ಅರ್ಧಭಾಗಕ್ಕೆ ಸಂಪರ್ಕ ಹೊಂದಿರುವಂತಹ ಮಾನವನ ಮುಂಡದೊಂದಿಗೆ ಸೇರಿಸಿರುವುದೇ ಆಗಿರುತ್ತದೆ.

ಮತ್ಸ್ಯಯನ್ನು ಜಗತ್ತಿನ ಸೃಷ್ಟಿಕರ್ತನಾಗಿರುವಂತಹ ದೇವರಾಗಿರುವ ಪ್ರಜಾಪತಿ ಅಥವಾ ಬ್ರಹ್ಮನೊಂದಿಗೆ ದಂತಕಥೆಯು ಆರಂಭಿಕ ಮೂಲಗಳು ಗುರುತಿಸುವ ಮುಖೇನ ಸಂಯೋಜಿಸಿರುತ್ತವೆ. ಆದಾಗ್ಯೂ ಈ ಮತ್ಸ್ಯಯನ್ನು ಮಹಾವಿಷ್ಣುವಿನ ಪ್ರಥಮ ಅವತಾರವಾಗಿ ಪುರಾಣ ಗ್ರಂಥಗಳು ಪ್ರಧಾನ ನೆಲೆಯಲ್ಲಿಯೇ ಸಂಯೋಜಿಸುತ್ತವೆ ಎಂದು ಹೇಳಬಹುದು. ಮಾನವನಿಗೆ ಸನ್ನಿಹಿತವಾಗಲಿರುವ ದುರಂತದ ಪ್ರವಾಹದ ಬಗೆಗೆ ಮತ್ಸ್ಯಯ್ಯ ಮುನ್ಸೂಚನೆಯನ್ನು ನೀಡುತ್ತದೆ. ಮತ್ಸ್ಯಯು ಮಾನವನಿಗೆ ಪ್ರಪಂಚದಲ್ಲಿರುವ ಪ್ರತಿಯೊಂದು ಧಾನ್ಯಗಳನ್ನು ಒಂದು ದೋಣಿಯಲ್ಲಿ ಸಂಗ್ರಹಿಸಿ ಇಡಲು ಸೂಚನೆಯ ಮೂಲಕ ಆದೇಶವೊಂದನ್ನು ನೀಡುತ್ತಾನೆ. ಕಥೆಯ ಕೆಲವು ರೂಪಕಗಳಲ್ಲಿ ಪ್ರತಿಯೊಂದು ಜೀವಿಗಳನ್ನೂ ಕೂಡ ಒಂದು ದೋಣಿಯಲ್ಲಿ ಸಂರಕ್ಷಿಸಬೇಕು. ಸಮುದ್ರದಲ್ಲಿ ಒದಗಿಬರುವಂತಹ ಎಲ್ಲಾ ಪ್ರವಾಹದ ಪ್ರಳಯವನ್ನು ಜಗತ್ತನ್ನು ನಾಶಪಡಿಸಿದಾಗ, ಅದರಿಂದ ಮಾನವನು ಕೆಲವು ಆವೃತ್ತಿಗಳಲ್ಲಿ ಸರಿಸುಮಾರು ಸಪ್ತ ಮಹಾನ್ ಋಷಿ ಮಹನೀಯರ ಜೊತೆಗೂಡಿ ಮತ್ಸಯು ಎಳೆಯುವಂತಹ ದೋಣಿಯನ್ನು ಹತ್ತುವ ಮೂಲಕ ಬದುಕುಳಿಯುತ್ತಾನೆ. ಆದ್ದರಿಂದಲೇ ಜಗತ್ತಿನಲ್ಲಿ ಉಂಟಾಗಿರುವಂತಹ ಸಮುದ್ರ ಮಹಾಪ್ರಳಯದಿಂದ ದವಸ – ಧಾನ್ಯಗಳು ಹಾಗೂ ಜೀವ – ಜಗತ್ತನ್ನು ರಕ್ಷಿಸಲು ಮಹಾವಿಷ್ಣುವೇ ಈ ಮತ್ಸಯ ಅವತಾರ ಸೃಷ್ಟಿಗೊಂಡು ರಕ್ಷಿಸಿರುವುದು ಒಂದು ಚರಿತ್ರೆಯೇ ಆಗಿ ರೂಪುಗೊಂಡಿರುವುದನ್ನು ಗುರುತಿಸಬಹುದು.

**ಕೂರ್ಮಾವತಾರ – ಆಮೆ – Kurma:** ಮಹಾವಿಷ್ಣುವಿನ ದಶಾವತಾರಗಳಲ್ಲಿ ಈ ಕೂರ್ಮಾವತಾರವೂ ಎರಡನೆಯ ಅವತಾರವೇ ಆಗಿರುತ್ತದೆ. ಈ ಅವತಾರವೂ ಮತ್ಸ್ಯಯ ಅನಂತರದ್ದೂ ಮತ್ತು ವರಾಹವತಾರದ ಹಿಂದಿನ ಅವತಾರವೇ ಆಗಿರುತ್ತದೆ.ಹಿಂದಿನ ಮತ್ಸ್ಯಯ ಅವತಾರದಂತೆಯೂ ಸತ್ಯಯುಗದಲ್ಲಿ ಸೃಷ್ಟಿಗೊಂಡಿರುತ್ತದೆ. ಕೂರ್ಮಕ್ಕೆ ಸಂಬಂಧಿಸಿದಂತೆ ಆಂಧ್ರಪ್ರದೇಶ ರಾಜ್ಯದಲ್ಲಿನ ಚಿತ್ತೂರು ಜಿಲ್ಲೆಯ ಕುರ್ಮೈ ಮತ್ತು ಶ್ರೀಕುರ್ಮಮ್‌ನಲ್ಲಿ ಕೂರ್ಮಕ್ಕೆ ಅರ್ಪಿತವಾಗಿರುವಂತಹ ದೇವಾಲಯಗಳಿವೆ ಎಂದು ಗುರುತಿಸಬಹುದು. ಸಮುದ್ರದ ಮಂಥನದ ಕಾಲಸಂದರ್ಭದ್ದಲಿ ಈ ಕೂರ್ಮ ಅವತಾರವು ಸೃಷ್ಟಿಗೊಂಡಿರುತ್ತದೆ. ಈ ಕೂರ್ಮವು ಮಹಾವಿಷ್ಣುವಿನ ಅರ್ಧ ಆಮೆಯ ಅರ್ಧ ಮನುಷ್ಯನ ರೂಪವೇ ಆಗಿರುತ್ತದೆ. ಮಂಥನದ ಕಾಲಘಟ್ಟದಲ್ಲಿ ಈ ಮಂಥನದ ಪ್ರಕ್ರಿಯೆಯಲ್ಲಿ ದೇವರುಗಳು ಮತ್ತು ರಾಕ್ಷಸರಿಗೆ ಸಹಾಯ ಮಾಡಲು ಈ ಅವತಾರದ ಮೂಲಕ ಮಹಾವಿಷ್ಣುವೂ ಮಂದಾರ ಪರ್ವತವನ್ನು ತನ್ನ ಚಿಪ್ಪಿನ ಮೇಲೆ ಇರಿಸಿಕೊಂಡು ಅಲ್ಲಿ ಸಮತೋಲನವನ್ನು ತಂದಿರುತ್ತಾನೆ. ಈ ಕೂರ್ಮ ಅವತಾರದಿಂದ ತನ್ನ ಬೆನ್ನಿನ ಮೇಲೆ ಇಡೀ ಅಖಂಡ ಬ್ರಹ್ಮಾಂಡದ ಸಂಪೂರ್ಣವಾದಂತಹ ಭಾರವನ್ನು ಹೊತ್ತಿರುತ್ತಾನೆ ಎಂದು ಪುರಾಣ ಗ್ರಂಥಗಳು ಸಾಕ್ಷೀಕರಿಸಿರುತ್ತವೆ. ಹಾಗೆಯೇ ಮುಂದುವರೆದಂತೆ ಗ್ರಹಿಸಿದಾಗ; ದೇವಾನುದೇವತೆಗಳು ಹಾಗೂ ಇವರ ವಿರುದ್ಧ ಸದಾ ಕಾಲವೂ ಯುದ್ಧವನ್ನು ಸಾರುವಂತಹ ಅಸುರರು ಅಮರತ್ವದ ಅಮೃತವನ್ನು ಪಡೆಯಲು ಸಾಗರವನ್ನು ಮಥಿಸಿರುತ್ತಾರೆ. ಹೀಗೆ; ಸಾಗರವನ್ನು ಮಂಥಿಸುವಾಗ ಮಂಥನದ ಕಾರ್ಯಕ್ಕಾಗಿ ಬಳಸಲಾಗುತ್ತಿದ್ದಂತಹ ಮಂದಾರ ಪರ್ವತವು ಮುಳುಗಲು ಆರಂಭಿಸುತ್ತದೆ. ಸಾಗರದ ಮಂಥನದ ಅನಂತರ ಬಂದಂತಹ ಅಮೃತವನ್ನು ಮಹಾವಿಷ್ಣುವೂ ಅಸುರರಿಗೆ ಸಿಗದಂತೆ ನೋಡಿಕೊಂಡಿರುತ್ತಾನೆ ಎಂದು ಹೇಳಬಹುದು. ಆವಾಗ ಇದನ್ನು ತಡೆಯುವ ಸಲುವಾಗಿಯೇ ಮಹಾವಿಷ್ಣುವು ದಶಾವತಾರದಲ್ಲಿ ಎರಡನೇ ಅವತಾರವೇ ಆಗಿರುವಂತಹ ಈ ಕೂರ್ಮ ಅಥವಾ ಆಮೆಯ ರೂಪದಲ್ಲಿ ಜನ್ಮತಾಳಿ ಪರ್ವತದ ಭಾರವನ್ನು ಹೊತ್ತಿರುವುದನ್ನು ಪುರಾಣ ಗ್ರಂಥಗಳು ಸಾಕ್ಷೀಕರಿಸಿರುತ್ತವೆ ಎಂದು ಹೇಳಬಹುದು.

**ವರಾಹವತಾರ – ಹಂದಿ ಮತ್ತು ಮನುಷ್ಯ ರೂಪ – The Boar:** ಮಹಾವಿಷ್ಣುವಿನ ಮೂರನೇ ಅವತಾರವೇ ಈ ವರಾಹ ಅವತಾರ. ಈ ವರಾಹ ಅವತಾರವು ಬಹುಮುಖ್ಯವಾಗಿ ಭೂಮಿಯ ಮೇಲೆ ಭೂ ಆಧಾರಿತ ಜೀವಿಗಳನ್ನು ರಕ್ಷಿಸುವುದು. ಹಾಗೆಯೇ ಜೀವರೂಪಗಳ ಆಗಮನವನ್ನು ಚಿತ್ರಿಸುತ್ತದೆ. ಜಲಚರ ಮತ್ತು ಉಭಯಚರ ರೂಪಗಳ ಅನಂತರ ಬಹುದೊಡ್ಡ ಮತ್ತು ಶಕ್ತಿಯುತವಾದ ಪ್ರಾಣಿಗಳು ಈ ಭೂಮಂಡಲವನ್ನು ಆಳಿದವು ಎಂಬುದಕ್ಕೆ ಪುರಾಣವೂ ಸಾಕ್ಷೀಕರಿಸುತ್ತದೆ. ಮಹಾವಿಷ್ಣುವಿನ ಈ ಅವತಾರದ ಕಥೆಯೂ ಕೂಡ ನಿಸರ್ಗವನ್ನು ಪಳಗಿಸುವುದೇ ಆಗಿದೆ. ಹಾಗೆಯೇ ಇಲ್ಲಿ ಮೂಲಭೂತವಾಗಿ ಭೂ ಆಧಾರಿತವಾಗಿರುವಂತಹ ಜೀವಕುಲಗಳು ಹಾಗೂ ಅವುಗಳನ್ನು ಹೋಲುವ ರೂಪಗಳು ವಾಸಿಸಲು ಯೋಗ್ಯವಾಗಿರುವ ಸ್ಥಳ ಇದಾಗಿದೆ. ಇಂತಹ ಭೂಮಂಡಲವನ್ನು ಬ್ರಹ್ಮದೇವನಿಂದ ವರವನ್ನು ಪಡೆದುಕೊಂಡಿರುವ 'ಹಿರಣ್ಯಾಕ್ಷ' ಎಂಬ ಮಹಾನ್ ಶಕ್ತಿಶಾಲಿ ರಾಕ್ಷಸನು ಇಡೀ ಭೂಮಿಯನ್ನು ತನ್ನ ವಶಕ್ಕೆ ಪಡೆದುಕೊಂಡನು. ಹೀಗೆ ಪಡೆದುಕೊಂಡಿರುವಂತಹ ಭೂಮಿಯನ್ನು ಸಮುದ್ರದ ತಳಕ್ಕೆ ತೆಗೆದುಕೊಂಡು ಹೋಗಿ ಬಚ್ಚಿಟ್ಟನು. ಇದನ್ನು ದಿವ್ಯದೃಷ್ಟಿಯಿಂದಲೇ ಅರಿತಂತಹ ಮಹಾವಿಷ್ಣುವು ಹಿರಣ್ಯಾಕ್ಷನು ಬ್ರಹ್ಮನಿಂಜಚಿ ಪಡೆದುಕೊಂಡಿರುವ ವರದ ವಿವರವನ್ನು ಪಡೆದುಕೊಂಡನು. ಅನಂತರದಲ್ಲಿ ತಲೆಯ ಭಾಗವೂ ಹಂದಿಯ ರೂಪವನ್ನು ಹಾಗೂ ದೇಹದ ಭಾಗವು ಮನುಷ್ಯ ರೂಪವನ್ನು ಹೊಂದಿದ್ದ ವರಾಹ ಅವತಾರವೂ ಸೃಷ್ಟಿಗೊಂಡಿರುತ್ತದೆ. ಈ ವರಾಹ ಅವತಾರವೂ ಸಮುದ್ರದ ತಳಕ್ಕೆ ಹೋಗಿ ಆ ಹಿರಣ್ಯಾಕ್ಷನೊಂದಿಗೆ ಘೋರವಾದಂತಹ ಯುದ್ಧವನ್ನು ಮಾಡಿ, ಆತನನ್ನು ಅಂಹರಿಸಿ, ಭೂದೇವಿಯನ್ನು ರಕ್ಷಿಸಿ ತದನಂತರದಲ್ಲಿ ಭೂಮಿಯ ಚಲನೆಯ ಸ್ಥಳಕ್ಕೆ ತಂದು ಬಿಟ್ಟಿರುವ ಕಥೆಯೇ ಇದಾಗಿರುತ್ತದೆ ಎಂಬುದನ್ನು ಪುರಾಣ ಗ್ರಂಥಗಳು ಅಲ್ಲಿನ ಕಥೆಗಳು ಇದೇ ದಾಖಲೀಕರಿಸುತ್ತವೆ ಎಂದು ಹೇಳಬಹುದು.

**ನರಸಿಂಹಾವತಾರ – ಸಿಂಹ ಮತ್ತು ಮನುಷ್ಯ ರೂಪ:** ಭೂಮಂಡಲದ ಸಕಲ ಜೀವಿಗಳ ರಕ್ಷಕನಾಗಿರುವ ಮಹಾವಿಷ್ಣುವೂ ತನ್ನ ಭಕ್ತರನ್ನು ರಕ್ಷಿಸುವ ಸಲುವಾಗಿಯೇ ದಶಾವತಾರಗಳನ್ನು ಎತ್ತಿದ್ದಾನೆ ಎಂಬುದು ಪುರಾಣದಲ್ಲಿ ದಾಖಲಾಗಿರುತ್ತದೆ. ಅದರಂತೆಯೇ ವಿಷ್ಣುವೂ ತಳೆದಿರುವಂತಹ ದಶಾವತಾರಗಳ ಪೈಕಿ ನರಸಿಂಹ ಅವತಾರವು ನಾಲ್ಕನೆಯದಾಗಿರುತ್ತದೆ. ಈ ಅವತಾರದಲ್ಲಿ ತಲೆಯ ಭಾಗವು ಸಿಂಹದ್ದಾಗಿದ್ದು ಹಾಗೂ ದೇಹವು ಮನುಷ್ಯ ರೂಪದ್ದಾಗಿರುತ್ತದೆ.

ಭೂಲೋಕದಲ್ಲಿ ತನ್ನ ಭಕ್ತಾಧಿಗಳ ರಕ್ಷಣೆ ಹಾಗೂ ಇಲ್ಲಿ ಧರ್ಮವನ್ನು ಸ್ಥಾಪಿಸುವುದಕ್ಕಾಗಿ ವೈಶಾಖ ಶುದ್ಧ ಚತುರ್ದಶಿಯ ದಿವಸದಂತು ಪ್ರದೋಶ ಕಾಲ ಸಂದರ್ಭದಲ್ಲಿ ವಿಷ್ಣು ನರಸಿಂಹನ ಅವತಾರವು ಸೃಷ್ಟಿಕೊಂಡಿರುತ್ತದೆ ಎಂದು ಪುರಾಣಗಳಲ್ಲಿ ಉಲ್ಲೇಖಗೊಂಡಿರುತ್ತದೆ. ಈ ಅವತಾರದಲ್ಲಿ ವಿಷ್ಣುವು ಅವತರಿಸಿದ್ದಾದರೂ ಯಾಕೆ ಎಂಬುದಕ್ಕೆ ಹಲವು ಹತ್ತು ಪುರಾಣಗಳಲ್ಲಿ ಸಾಕ್ಷ್ಯಗಳು ಒದಗಿಬರುತ್ತವೆ. ಅವುಗಳನ್ನು ಬಹುಸೂಕ್ಷ್ಮವಾಗಿಯೇ ಗ್ರಹಿಸಿದಾಗ; ಈ ಮಹಾವಿಷ್ಣುವಿನ ವಾಸದ ತಾಣವೇ ಆಗಿರುವಂತಹ ವೈಕುಂಠದಲ್ಲಿ ಜಯ–ವಿಜಯರೆಂಬ ಇಬ್ಬರೂ ಸೋದರರು ದ್ವಾರಪಾಲಕ ವೃತ್ತಿಯಲ್ಲಿದ್ದರು. ಇವರು ಒಂದು ದಿವಸ ಋಷಿ ಕುಮಾರನ ದರ್ಶನಕ್ಕೆ ತಡೆದರು ಎಂಬ ಕಾರಣಕ್ಕೆ ಅವರು ಶಾಪಗ್ರಸ್ಥರಾಗಿದ್ದಾರೆ. ಇದಾದ ಕಾರಣ ಮತ್ತು ಪರಿಣಾಮದಿಂದಾಗಿಯೇ ಭೂಲೋಕದಲ್ಲಿ ವಿಷ್ಣುವಿನ ದ್ವೇಷಿಗಳನ್ನು ಜನ್ಮವೆತ್ತಿರುತ್ತಾರೆ. ಅವರಲ್ಲಿ ಹಿರಣ್ಯಾಕಶಿಪು ಒಬ್ಬರು. ಈಗಾಗಲೇ ವರಾಹ ರೂಪದಲ್ಲಿ ಈತನ ಸೋದರನಾಗಿದ್ದಂತಹ ಹಿರಣ್ಯಾಕ್ಷನನ್ನು ಸಂಹರಿಸಿರುವುದರಿಂದ ಈ ವಿಷ್ಣುವಿನ ಮೇಲೆ ಅತೀವವಾಗಿಯೇ ಹಿರಣ್ಯಕಶಿಪುವೂ ಕೋಪಗೊಂಡಿದ್ದನು. ಆದ್ದರಿಂದಲೇ ಹಂದಿಯ ರೂಪದಲ್ಲಿನ ವಿಷ್ಣುವನ್ನು ಸಂಹರಿಸಲು ತನ್ನ ಕುಲದೈವವೇ ಆಗಿರುವಂತಹ ಸೃಷ್ಟಿಕರ್ತನಾದ ಬ್ರಹ್ಮದೇವನಿಂದ ಸಾವಿಲ್ಲದ ವರವನ್ನು ತಾನು ಬಯಸಿದ, ರೂಪದಲ್ಲಿ ಯಾರು ಸೃಷ್ಟಿಯಾಗಲು ಸಾಧ್ಯವಿಲ್ಲವೆಂದು ವರವೊಂದನ್ನು ಪಡೆದು, ಭೂಲೋಕದಲ್ಲಿ ಆಡಳಿತವನ್ನು ನಡೆಸುತ್ತಿದ್ದನು. ವಿಷ್ಣು ದ್ವೇಷಿಯಾಗಿರುವ ಇವನಿಗೆ ವಿಷ್ಣುವಿನ ಭಕ್ತನಾಗಿ ತನ್ನ ಮಗ ಪ್ರಹ್ಲಾದಕುಮಾರ ರೂಪುಗೊಂಡಿರುತ್ತಾನೆ. ಇದರಿಂದಲೂ ಕೂಡ ಹಿರಣ್ಯಕಶಿಪು ಮತ್ತಷ್ಟು ಕೋಪಗೊಂಡು ತನ್ನ ಅಸ್ಥಾನದ ಸೈನಿಕರಿಗೆ ಪ್ರಹ್ಲಾದನನ್ನು ಕೊಲ್ಲುವಂತೆ ಆಜ್ಞಾಪಿಸಿದ್ದನು. ಅದು ಯಾವುದು ಕೂಡ ಪ್ರಯೋಜನಕ್ಕೆ ಬಂದಿರುವುದಿಲ್ಲ. ಒಂದು ದಿನ ಪ್ರಹ್ಲಾದನನ್ನು ಅತೀವ ಪ್ರೀತಿಯಿಂದ ಮಾತನಾಡಿಸುತ್ತಿದ್ದಾಗ ಚರ್ಚಿತವಾಗಿ; ಹರಿ ಅಥವಾ ವಿಷ್ಣುವನ್ನು ನಿಂತಲ್ಲೇ ತೋರಿಸಿಕೊಟ್ಟವನು, ಛಲಗಾರನಾದನು. ತನ್ನ ಅರಮನೆಯ ಒಂದು ಕಂಬವನ್ನು ತನ್ನ ಅಸ್ತ್ರವಾಗಿ ಗದೆಯಿಂದಲೇ ಸೀಳಿದನು. ಅದರಿಂದ ಸಿಂಹದ ತಲೆಯ ಹಾಗೂ ಮನುಷ್ಯ ದೇಹದ ನರಸಿಂಹನು ಪ್ರತ್ಯಕ್ಷನಾಗಿ ಈ ಹಿರಣ್ಯಕಶಿಪುವು ಆತನನ್ನು ತನ್ನ ಕೈಗಳಲ್ಲಿರುವ ಉಗುರುಗಳಿಂದ ಆತನ ಹೊಟ್ಟೆಯನ್ನು ಬಗೆದು, ಸಂಹರಿಸಿದನು ಎಂಬುದು ಪುರಾಣ ಕಥೆಗಳಲ್ಲಿ ದಾಖಲಾಗಿರುವುದನ್ನು ಗುರುತಿಸಬಹುದು.

**ವಾಮನವತಾರ – ಕುಬ್ಜರೂಪಿ ಮಾನವ:** ದಶಾವತಾರವು ಭಾರತೀಯ ಸಂದರ್ಭದಲ್ಲಿನ ಪುರಾಣ ಕಥೆಗಳಲ್ಲಿ ಪೂಜ್ಯನೀಯ ದೇವತೆಯಾಗಿರುವಂತಹ ಮಹಾವಿಷ್ಣುವಿನ ಹತ್ತು ಅವತಾರಗಳನ್ನು ಉಲ್ಲೇಖಿಸಲಾಗಿದೆ. ಅವುಗಳಲ್ಲಿ ವಾಮನವತಾರವು ಐದನೆಯ ಅವತಾರವೇ ಆಗಿದೆ ಎಂದು ಹೇಳಬಹುದು. ಸುವ್ಯವಸ್ಥೆಯಲ್ಲಿನ ಸಮಾಜವು ಅವ್ಯವಸ್ಥೆಗೆ ಕಾರಣವಾಗುವ ಸದಾಚಾರವನ್ನು ದುಷ್ಟತನವೂ ಮೀರಿರುತ್ತದೆ. ಇಂತಹ ಸಂದರ್ಭಗಳಲ್ಲೆಲ್ಲ ಮಹಾವಿಷ್ಣುವು ಬ್ರಹ್ಮಾಂಡದಲ್ಲಿ ಕ್ರಮ ಹಾಗೂ ಶಾಂತಿಯನ್ನು ಮತ್ತೇ ಮತ್ತೇ ಸ್ಥಾಪಿಸಲು ವಿವಿಧ ಅವತಾರಗಳಲ್ಲಿ ಅವತರಿಸಿರುತ್ತಾನೆ. ಅಂತಹದರಲ್ಲಿ ಈ ವಾಮನಾವತಾರ ಅಥವಾ ಕುಬ್ಜರೂಪಿ ಮಾನವನ ಅವತಾರ ಇದಾಗಿರುತ್ತದೆ. ಬಲಿ ಚಕ್ರವರ್ತಿಯೆಂಬ ಒಬ್ಬ ರಾಕ್ಷಸನು ಭೂಲೋಕವನ್ನು ಆಳುತ್ತಿದ್ದಾಗ, ಈತನು ತೀವ್ರವ್ರತರಹದ ಧಾರ್ಮಿಕ ವಿಧಿವಿಧಾನಗಳನ್ನು ಆಚರಣೆಗೆ ತರುವ ಮುಖೇನ ದೇವರುಗಳನ್ನು ಗೆದ್ದುಕೊಂಡಿದ್ದನು. ಮಹಾವಿಷ್ಣುವು ಈ ಬಲರಾಜನಾಗಿದ್ದಂತಹ ರಾಕ್ಷಸನನ್ನು ಸೋಲಿಸಿ ಸಂಹರಿಸಲು ವಾಮನ ರೂಪದಲ್ಲಿ ತನ್ನ ಐದನೆಯ ಅವತಾರವನ್ನು ಸೃಷ್ಟಿಸಿ ಭೂಮಿಗೆ ಬಂದಿರುತ್ತಾನೆ ಎಂಬುದು ಪುರಾಣಗಳಿಂದ ಗುರುತಿಸಲಾಗಿದೆ. ಮಹಾವಿಷ್ಣುವೂ ವಾಮನ ಕುಬ್ಜ ಬ್ರಾಹ್ಮಣನಾಗಿ ಕಾಣಿಸಿಕೊಂಡು ಉಡುಗೊರೆಯನ್ನು ಬಯಸಿ ಈ ಬಲಿರಾಜನ ಹತ್ತಿರ ಬಂದಿರುತ್ತಾನೆ. ಬಲಿರಾಜನು, ಈ ವಾಮನು ಕೇಳಿದ ದಾನಕ್ಕೆ ಒಪ್ಪಿರುತ್ತಾನೆ. ಅದೇನೆಂದರೆ ತನ್ನ ವಸ್ತುಗಳನ್ನು ಇಡಲು ಮೂರು ಅಂಗುಲದ ಭೂದಾನವೇ ಆಗಿರುತ್ತದೆ. ಇದೇ ಯಾವುದೇ ಹಿಂದೇಟು ಹಾಕದೆ ದಾನಿಯಾಗಿದ್ದಂತಹ ಬಲಿರಾಜನು ನೀಡುತ್ತಾನೆ. ವಾಮನ ವಸ್ತುಗಳು ಇಡೀ ಭೂಮಿಯನ್ನೇ ಆವರಿಸಿಬಿಟ್ಟಿರುತ್ತದೆ. ತನ್ನ ಪಾದಗಳನ್ನು ಇಡಲು ಸ್ಥಳವೇ ಇಲ್ಲವೆಂದಾಗ, ಈತನು ತನ್ನ ತಲೆಯ ಮೇಲೆಇಡಬಹುದು ಎಂದು ಒಪ್ಪಿಕೊಳ್ಳುತ್ತಾನೆ. ಆವಾಗ ವಾಮನ ರೂಪದಲ್ಲಿನ ವಿಷ್ಣುವು ಆತನನ್ನು ತನ್ನ ಪಾದದಿಂದ ಪಾತಾಳಕ್ಕೆ ತುಳಿಯುತ್ತಾನೆ. ಈ ವಾಮನ ಅವತಾರವು ಪ್ರಧಾನವಾಗಿ ಅಸುರ ರಾಜ ಮಹಾಬಲಿಯಿಂದಲೇ ಆರಂಭವಾಗುತ್ತದೆ. ಈಗಾಗಲೇ ಚರ್ಚಿಸಿರುವಂತಹ ಅಂಶಗಳ ಆಧಾರಿತವಾಗಿ ಹೇಳುವುದಾದರೆ; ವರಾಹ ರೂಪದಲ್ಲಿ ಹಿರಣ್ಯಾಕ್ಷನನ್ನು ಹಾಗೂ ನರಸಿಂಹ ಅವತಾರದಲ್ಲಿ ಹಿರಣ್ಯ ಕಶಿಪುವನ್ನು ಸಂಹರಿಸಿರುತ್ತ, ವಿಷ್ಣುವು ಇವರಿಬ್ಬರ ವಂಶಸ್ಥರಾದಂತಹ ಮಹಾಬಲಿ ಪ್ರಹ್ಲಾದನ ಮೊಮ್ಮಗ ಹಾಗೂ ವಿಮೋಚನನ ಮಗನಾಗಿದ್ದಂತಹ ಈ ಮಹಾಬಲಿ ರಾಜನನ್ನು ಸಂಹರಿಸಿದ್ದಾನೆ ಎಂಬುದು ತಿಳಿದುಬರುತ್ತದೆ.

ಮತ್ತೇ ಸಾಗರದ ಮಂಥನದ ಅನಂತರ ದೇವತೆಗಳು ಅಮರ ಮತ್ತು ಬಲಿಷ್ಠ ಶಕ್ತಿಶಾಲಿಗಳೇ ಆದರು.ಆದ್ದರಿಂದಲೇ ಸ್ವರ್ಗದ ಅಧಿಪತಿಯಾದಂತಹ ಇಂದ್ರನು ತನ್ನ ಸೈನ್ಯದ ಮೂಲಕ ದೈತ್ಯರಾಜ ಬಲಿ ಮತ್ತು ಆತನ ಅಸುರ ಸೈನ್ಯವನ್ನು ಸೋಲಿಸಿದನು. ಸೋತಿರುವಂತಹ ಬಲಿರಾಜ ಒಂದು ದಿನ ಶುಕ್ರಾಚಾರ್ಯರನ್ನು ಭೇಟಿ ಮಾಡಿ ತನ್ನ ರಾಜ್ಯ ಹಾಗೂ ಅಧಿಕಾರವನ್ನು ಮರಳಿ ಪಡೆಯುವ ಮಾರ್ಗವನ್ನು ತಾವು ಹೇಳಿಕೊಡಬೇಕು ಎಂದಾಗ, ಶುಕ್ರಾಚಾರ್ಯರು ಬಲಿ ಅಸುರನಿಗೆ ನೀನು ಮಹಾಭಿಷೇಕ ವಿಶ್ವಜೀತಯಾಗವೊಂದನ್ನು ಮಾಡು, ಆವಾಗ ಎಲ್ಲಾ ಶಕ್ತಿ ಹಾಗೂ ರಾಜ್ಯವು ಮರಳಿ ಬರುತ್ತದೆ ಎಂದನು. ಅದರಂತೆಯೇ ಬಲಿ ಅಸುರನನ್ನು 'ಯಾಗ'ವನ್ನು ಮಾಡಿ ಎಲ್ಲವನ್ನು ಮರಳಿ ಪಡೆದುಕೊಂಡನು. ತದನಂತರ ಮತ್ತೆ ಶುಕ್ರಾಚಾರ್ಯರ ಬಳಿ ಬಂದು ತನ್ನ ವಿಜಯದ ಬಗೆಗೆ ನಿವೇದಿಸಿಕೊಂಡನು. ಆವಾಗ ಈ ಶುಕ್ರಾಚಾರ್ಯರು ನೀನು ಹೀಗೆ ಯಾಗಗಳನ್ನು ಮಾಡು, ಇದರೊಟ್ಟಿಗೆ ಬಡವರಿಗೆ ಹಾಗೂ ಬ್ರಾಹ್ಮಣರಿಗೆ ದಾನಗಳನ್ನು ನೀಡು ಆವಾಗ ನೀನು ನಿರ್ಭೀತ ಹಾಗೂ ಶಕ್ತಿಯುತವಾದಂತಹ ಬದುಕನ್ನು ನಡೆಸುವ ಮುಖೇನ ಭೂಮಂಡಲವನ್ನು ಆಳಬಹುದು ಎಂದು ಹೇಳಿದ್ದನು. ಅದೇ ರೀತಿ ಯಾಗಗಳನ್ನು ಮಾಡುತ್ತಾ ಹಾಗೂ ದಾನವನ್ನು ಕೂಡ ಮಾಡುತ್ತಲೇ ಬರುತ್ತಿದ್ದ ಬಲಿ ಅಸುರ ರಾಜನಿಗೆ ಕಂಟಕವನ್ನು ತರಲು ಇಂದ್ರನು ಮಹಾವಿಷ್ಣುವನ್ನು ಬೇಡಿದಾಗ, ಈತನ ದಾನವಂತನಾಗಿದ್ದರಿಂದಲೇ ಆ ದಾನದ ಮುಖಾಂತರವೇ ಆತನನ್ನು ಸಂಹರಿಸಬೇಕೆಂದು ಈ ಕುಬ್ಜನ ರೂಪದಲ್ಲಿ ಅವತರಿಸಿ ಸಂಹರಿಸಿರುವುದನ್ನು ಕಾಣಬಹುದು.

**ಪರಶುರಾಮವತಾರ – ಕೋಪಗೊಂಡ ವ್ಯಕ್ತಿ :** ಮಹಾವಿಷ್ಣುವಿನ ಆರನೇ ಅವತಾರವೇ ಈ ಪರಶುರಾಮವತಾರ ಎನ್ನಬಹುದು. ಈ ಪರಶುರಾಮನು ಮಹಾನ್ ತಪಸ್ವಿ, ಜಮದಗ್ನಿ ಹಾಗೂ ರೇಣುಕಾದೇವಿಯರ ಮಗನಾಗಿದ್ದನು. ಈತನು ಶಿವನನ್ನು ಕುರಿತು ಘೋರವಾದಂತಹ ತಪಸ್ಸನ್ನು ಮಾಡಿ, ಶಿವನಿಂದ ವರವೊಂದನ್ನು ಪಡೆದುಕೊಂಡಿದ್ದನು. ಆ ವರವೆಂದರೆ, ಅದು ಅಧರ್ಮದಿಂದ

ಧರ್ಮವನ್ನು ರಕ್ಷಿಸುವ ದುರ್ಜನರಿಂದ ಸಜ್ಜರನ್ನು ಕಾಪಾಡುವಂತಹ ಕೊಡಲಿಯೇ ಆಗಿರುತ್ತದೆ. ಈತನು ಪುರಾಣಗಳ ಪ್ರಕಾರ; ಬ್ರಾಹ್ಮಣ ಮತ್ತು ಕ್ಷತ್ರಿಯನಾಗಿದ್ದನು. ಅಂದರೆ ಯೋಧ, ಸಂತ. ಈತನು ಬ್ರಾಹ್ಮಣ ಹಾಗೂ ಕ್ಷತ್ರಿಯ ಎರಡು ಕರ್ತವ್ಯಗಳನ್ನು ನಿರ್ವಹಿಸಿದವನು. ಜಮದಗ್ನಿ ಮತ್ತು ರೇಣುಕೆಯರು ಆಶ್ರಮವೊಂದನ್ನು ನಿರ್ಮಿಸಿಕೊಂಡು ಬದುಕಿದ್ದ ಪ್ರಾಂತ್ಯವನ್ನು ಅರಸ ಕಾರ್ತವೀರ್ಯ ಅರ್ಜುನ ಎಂಬುವನು ಆಳುತ್ತಿದ್ದನು. ಒಂದು ದಿನ ಅರಸನು ಈ ಆಶ್ರಮದ ಮಾರ್ಗವಾಗಿ ಬಂದಿರುತ್ತಾನೆ. ಆಗ ಜಮದಗ್ನಿಯ ಆಶ್ರಮದಲ್ಲಿ ವಿಹರಿಸಿದನು. ಅಲ್ಲಿ ಒಂದು ದೈವಿಕ ಕಾಮಧೇನು ಹಸುವಿತ್ತು. ಅದರ ಹಾಲು ಹಾಗೂ ಇತರ ಉತ್ಪನ್ನಗಳನ್ನು ಅರಸ ಮತ್ತು ಈತನ ಸೈನಿಕರಿಗೆ ಉಣಬಡಿಸಿದ್ದರು. ಇದರ ಉತ್ಪನ್ನಗಳನ್ನು ಸವಿದಂತಹ ಅರಸ ಈ ಕಾಮಧೇನು ಹಸುವನ್ನು ನಮಗೆ ನೀಡು ಎಂದು ಕೇಳಿಕೊಂಡನು. ಆದರೆ ಮಹರ್ಷಿ ಜಮದಗ್ನಿ ಮೊದಲೇ ಕೋಪಿಷ್ಟ. ಇದರಿಂದ ಸಿಟ್ಟಾಗಿ ಹಸುವನ್ನು ಕೊಡಲು ಸಂಪೂರ್ಣವಾಗಿ ನಿರಾಕರಿಸಿದ್ದನು, ಇದರಿಂದ ಅತೀವ ಕೋಪಗೊಂಡಿರುವ ಅರಸನು ಈ ಆಶ್ರಮವನ್ನು ನಾಶಮಾಡಿ ಕಾಮಧೇನು ಹಸುವನ್ನು ಬಲವಂತವಾಗಿ ಪಡೆದು ಅರಮನೆಗೆ ತೆರಳಿದನು. ಆಶ್ರಮಕ್ಕೆ ಬಂದಂತಹ ಪರಶುರಾಮನು ಈ ಪ್ರಸಂಗವನ್ನು ಕಂಡು ಕೋಪಗೊಂಡು ಶಿವನಿಂದ ಪಡೆದಿದ್ದ ಕೊಡಲಿಯನ್ನು ಹಿಡಿದು ರಾಜನ ಅರಮನೆಗೆ ನುಗ್ಗಿ ಏಕಾಂಗಿಯಾಗಿ ರಾಜನ ಸೈನ್ಯವನ್ನು ಹಾಗೂ ರಾಜನನ್ನು ತನ್ನ ಕೊಡಲಿಗೆ ಆಹುತಿ ನೀಡಿದನು.ಇದರ ಪ್ರತೀಕಾರಕ್ಕಾಗಿಯೇ ಈ ಕಾರ್ತವೀರ್ಯನ ಮಕ್ಕಳು ಆಶ್ರಮಕ್ಕೆ ಬಂದು ಮಹರ್ಷಿ ಜಮದಗ್ನಿಯನ್ನು ಕೊಂದನು. ಇದರಿಂದ ಮತ್ತಷ್ಟು ಕೋಪಗೊಂಡಿರುವಂತಹ ಪರಶುರಾಮನು ಪ್ರತಿಯೊಬ್ಬ ಕ್ಷತ್ರಿಯರನ್ನು ನಾಶ ಮಾಡುವ ಪ್ರತಿಜ್ಞೆಯೊಂದನ್ನು ಮಾಡಿದನು. ಆ ಕಾರಣವಾಗಿಯೇ ಇಡೀ ಭೂಮಂಡಲವನ್ನೇ ಇಪ್ಪತ್ತೊಂದು ಬಾರಿ ಸಂಚರಿಸಿ ತನ್ನ ಕೊಡಲಿಗೆ ಸಿಕ್ಕಿದಂತಹ ಕ್ಷೇತ್ರಿಯ ವಗರ್ ದುರಕ್ಕೆ ಸಂಹರಿಸಿ ಅದರ ರಕ್ತದಿಂದ ಐದು ಮಹಾನ್ ಸರೋವರಗಳನ್ನು ತುಂಬಿಸಿದ್ದನು ಎಂಬುದು ಪುರಾಣ ಹಾಗೂ ಪುಣ್ಯಕಥೆಗಳಲ್ಲಿ ದಾಖಲೀಕರಣಗೊಂಡಿರುತ್ತದೆ. ಹೀಗೆ ಸುತ್ತುತ್ತಿರುವಾಗ ಈತನ ತಂದೆಯ ತಂದೆ ಅಂದರೆ, ತಾತ ಒಂದು ದಿನ ಎದುರಿಗೆ ಕಾಣಿಸಿಕೊಂಡು ನೀನು ಇದನ್ನು ನಿಲ್ಲಿಸಿ, ಚಿರಂಜೀವಿ, ಅಮರವಾಗಿರುವೆ ಎಂದರು.ಈತನು ಅಜ್ಜನ ಮಾತಿಗೆ ಒಪ್ಪಿ ನಿಲ್ಲಿಸಿದನು.ಮತ್ತೇ ಮಹೇಂದ್ರಗಿರಿ ಪರ್ತವಕ್ಕೆ ಹೋಗಿ ತಪಸ್ಸಿನಲ್ಲಿ ಮಗ್ನನಾಗಿರುತ್ತಾನೆ. ಅದು ಇಂದಿಗೂ ಈತನು ತಪಸ್ಸಿನ ರೂಪದಲ್ಲಿ ಜೀವಂತವಾಗಿದ್ದಾನೆ ಎಂದು ವೈದಿಕ ಪಂಥದಲ್ಲಿ ಹಾಗೂ ವೈಷ್ಣವ ಪಂಥದಲ್ಲಿ ಹೆಚ್ಚಿನ ರೀತಿಯಲ್ಲಿಯೇ ನಂಬಲಾಗಿರುತ್ತದೆ.

**ರಾಮಾವತಾರ – ರಾಮ – ಅಯೋಧ್ಯೆಯ ರಾಜಕುಮಾರ – ರಾಜ:** ಮಹಾವಿಷ್ಣುವಿನ ಏಳನೇ ಅವತಾರವೇ ರಾಮವತಾರವೇ ಆಗಿದೆ.ಈ ಅವತಾರವು ತ್ರೇತಾಯುಗದಲ್ಲಿ ಸೃಷ್ಟಿಗೊಂಡಿರುತ್ತದೆ.ಭಾರತೀಯ ಸಂದರ್ಭದಲ್ಲಿನ ವೈದಿಕ ಧರ್ಮದಲ್ಲಿ ಈ ಅವತಾರದ ರಾಮನನ್ನು ಹೆಚ್ಚು ಪೂಜಿಸುವುದೇ ಆಗಿದೆ. ಹಾಗೆಯೇ ರಾಮನನ್ನು ಆದರ್ಶ ವೀರ ಮಹಾಪುರುಷ ಎಂದು ಕೂಡ ಪುರಾಣಗಳಲ್ಲಿ ದಾಖಲಿಸಲಾಗಿದೆ. ಈತನ ಚರಿತ್ರೆಯನ್ನು ದಾಖಲೀಕರಿಸಿರುವಂತಹ ಭಾರತದ ಮಹಾಕಾವ್ಯಗಳಲ್ಲಿ ಒಂದಾಗಿರುವ ರಾಮಾಯಣದ ಕಥೆಯು ವೈದಿಕ ಧರ್ಮದಲ್ಲಿ, ಅತ್ಯಂತ ವ್ಯಾಪಕವಾಗಿ ಅಧ್ಯಯನ ಮಾಡಲ್ಪಟ್ಟ ಪ್ರಧಾನ ಗ್ರಂಥಗಳಲ್ಲಿ ಒಂದಾಗಿದೆ. ರಾಮನು ತನ್ನ ಸೋದರ ಹಾಗೂ ಪರಮಾಪ್ತ ಭಕ್ತನಾಗಿದ್ದಂತಹ ಹನುಮಾನ್ ಜೊತೆಗೆಯೇ ತನ್ನ ಧರ್ಮಪತ್ನಿ ಸೀತೆ ಮಾತೆಯೊಂದಿಗೆ 14 ವರ್ಷಗಳ ಕಾಲ ವನವಾಸದಲ್ಲಿದ್ದಾಗ ಲಂಕಾದ ಅಧಿಪತಿಯಾಗಿದ್ದಂತಹ ಅಸುರರ ಮಹಾನ್ ಶಕ್ತಿಶಾಲಿ ಚಕ್ರವರ್ತಿ ಹಾಗೂ ರಾಜನಾಗಿದ್ದ ರಾವಣನೂರನು ಸೀತಾಮಾತೆಯನ್ನು ಅಪಹರಿಸಿ ತನ್ನ ರಾಜ್ಯದಲ್ಲಿನ ಅಶೋಕ ವನದಲ್ಲಿ ಇರಿಸಿದ್ದನು. ಸೋದರರಾದಂತಹ ರಾಮ, ಲಕ್ಷ್ಮಣರು ಮತ್ತು ವಾನರ ಸಹಯೋಗದೊಂದಿಗೆ ಶ್ರೀಲಂಕಾವನ್ನು ಮುತ್ತಿಗೆ ಹಾಕಿ ಅಲ್ಲಿನ ಅಸುರರ ಚಕ್ರವರ್ತಿಯಾಗಿದ್ದ ರಾವಣನನ್ನು ಕೊಂದು ಸೀತೆಯನ್ನು ಆತನಿಂದ ಬಿಡುಗಡೆಗೊಳಿಸಿಕೊಂಡು ತಮ್ಮ ಅಯೋಧ್ಯೆ ನಗರಕ್ಕೆ ಹಿಂತಿರುಗಿದರು ಎಂದು ಪುರಾಣ ಗ್ರಂಥಗಳಲ್ಲಿ ದಾಖಲೀಕರಿಸಲಾಗಿದೆ ಎಂಬುದನ್ನು ಪ್ರಸ್ತುತ ಅಧ್ಯಯನದಿಂದಲೂ ಕೂಡ ಗುರುತಿಸಲಾಗಿದೆ.

**ಬಲರಾಮವತಾರ ಅಥವಾ ಬುದ್ಧಾವತಾರ:** ಬಲರಾಮನು ದ್ವಾಪರಯುಗದ ಮಹಾಪುರುಷರಲ್ಲಿ ಒಬ್ಬ ತತ್ವಜ್ಞಾನಿ ಹಾಗೂ ಮಾರ್ಗದರ್ಶಿಯಾಗಿದ್ದನು. ವೈದಿಕರ ಶ್ರೀವೈಷ್ಣವ ಪಟ್ಟಿಯಲ್ಲಿ ಬಲರಾಮನು ಮಹಾವಿಷ್ಣುವಿನ ಎಂಟನೇ ಅವತಾರವೇ ಆಗಿರುತ್ತದೆ. ಮಹಾವಿಷ್ಣುವಿನ ಅವತಾರವೇ ಆಗಿರುವಂತಹ ಬಲರಾಮನನ್ನು ಬಲದೇವ, ಬಲಭದ್ರ ಹಾಗೂ ಹಲಾಯುಧ ಎಂದೂ ಕರೆಯುತ್ತಾರೆ. ಈ ಬಲರಾಮನೇ ಶ್ರೀಕೃಷ್ಣನ ಹಿರಿಯ ಸೋದರನಾಗಿದ್ದನು. ಈತನನ್ನು ಸರ್ವೇಸಾಮಾನ್ಯವಾಗಿ ವಿಷ್ಣುವಿನ ಅವತಾರವೆಂದು ಪರಿಗಣಿಸಲಾಗುತ್ತದೆ. ಈತನನ್ನು ಕೆಲವೊಮ್ಮೆ ಮಹಾವಿಷ್ಣುವಿನ ಸಂರಕ್ಷಣ ರೂಪ ಮತ್ತು ವಿಷ್ಣುವಿನ ಎಂಟನೇ ಅವತಾರ ಎಂದು ಗುರುತಿಸಲಾಗಿದೆ. ಬಲರಾಮನು ಮಹಾಭಾರತದಲ್ಲಿ ಯೋಧನಗಿದ್ದನು. ಈತನ ಆಯುಧ ನೇಗಿಲು ಆಗಿತ್ತು.ಬುದ್ಧನು ಕ್ರಿ.ಪೂ.ಆರನೆಯ ಶತಮಾನದಲ್ಲಿ ಹಿಂಸೆಯನ್ನು ವಿರೋಧಿಸಿ ಅಹಿಂಸೆಯ ಮಾರ್ಗವನ್ನು ಹಾಗೂ ದುಃಖನಿವಾರಣಾ ಮಾರ್ಗವನ್ನು ಜಗತ್ತಿಗೆ ಬೋಧಿಸಿದ ಮಹಾಗುರು ಎಂದು ಪರಿಗಣಿಸಲಾಗಿದೆ.

**ಕೃಷ್ಣಾವತಾರ:** ಮಹಾವಿಷ್ಣುವಿನ ಒಂಭತ್ತನೆಯ ಅವತಾರವೇ ಶ್ರೀಕೃಷ್ಣ ಅವತಾರವೇ ಆಗಿರುತ್ತದೆ. ದ್ವಾಪರಯುಗದಲ್ಲಿ ಶ್ರೀಕೃಷ್ಣನು ಒಬ್ಬ ಮಹಾನ್ ತತ್ವಜ್ಞಾನಿ ಹಾಗೂ ಮಾರ್ಗದರ್ಶಿಯಾಗಿದ್ದನು ಎಂದು ವೈದಿಕ ಹಾಗೂ ವೈಷ್ಣವ ಪಂಥದಲ್ಲಿನ ಪುರಾಣ ಗ್ರಂಥಗಳಲ್ಲಿ ಉಲ್ಲೇಖಿತಗೊಂಡಿರುವುದನ್ನು ಗುರುತಿಸಬಹುದು. ಭಾರತೀಯ ಸಂದರ್ಭದಲ್ಲಿ ವೈದಿಕ ಧರ್ಮದಲ್ಲಿನ ಹಾಗೂ ಹಿಂದೂಗಳ ಪ್ರಧಾನ ದೇವತೆಯೇ ಈ ಶ್ರೀಕೃಷ್ಣನಾಗಿದ್ದಾನೆ. ಈ ಶ್ರೀಕೃಷ್ಣನು ದೇವಕಿ ಮತ್ತು ವಸುದೇವ ಎಂಬುವರ ಎಂಟನೇ ಮಗನಾಗಿ ಲೋಕದಲ್ಲಿ ಅಧರ್ಮವನ್ನು ನಾಶ ಮಾಡಿ, ಸಧರ್ಮವನ್ನು ಪುನರ್‌ಸ್ಥಾಪಿಸಲು ಜನ್ಮವೆತ್ತಿದ್ದಾನೆ ಎಂದು ವೈಷ್ಣವ ಪಂಥದವರು ಇಂದಿನವರೆಗಿನ ಪ್ರಬಲವಾಗಿರುವ ನಂಬಿಕೆಯೇ ಆಗಿರುತ್ತದೆ. ಮತ್ತೇ ದ್ವಾಪರಯುಗದಲ್ಲಿ ಸಂಭವಿಸಿರುವ ಮಹಾಭಾರತದಲ್ಲಿ ಪ್ರಧಾನವಾದಂತಹ ಪಾತ್ರವನ್ನು ಕೂಡ ನಿರ್ವಹಿಸಿದ್ದವನೇ ಈ ಶ್ರೀಕೃಷ್ಣನು.ಈತನು ತನ್ನ ಅಣ್ಣನಾಗಿರುವ ಬಲರಾಮನ ಜೊತೆಗೆಯೇ ಕಾಣಿಸಿಕೊಂಡಿರುತ್ತಾನೆ. ಈ ಬಲರಾಮನನ್ನು ಸರ್ವೇಸಾಮಾನ್ಯವಾಗಿ ಮಹಾವಿಷ್ಣುವಿನ ಒಂದು ಅವತಾರವೆಂದು ಪರಿಗಣಿತವಾಗಿರುತ್ತದೆ. ಆದಾಗ್ಯೂ ಈ ಶ್ರೀವೈಷ್ಣವ ಪಟ್ಟಿಗಳಲ್ಲಿ ವಿಷ್ಣುವಿನ ಎಂಟನೆಯ ಅವತಾರವಾಗಿ ಬಲರಾಮನನ್ನು ಸೇರಿಸಿ, ಆ ಜಾಗದಲ್ಲಿ ಬುದ್ಧನನ್ನು ಕೈಬಿಟ್ಟಿರುತ್ತದೆ ಮತ್ತು ಈ ಪಟ್ಟಿಯಲ್ಲಿ ಕೃಷ್ಣನು ಒಂಭತ್ತನೆಯ ಅವತಾರವಾಗಿಯೇ ಕಾಣಿಸಿಕೊಳ್ಳುತ್ತಾನೆ. ಶ್ರೀಕೃಷ್ಣನು ಅಸುರ ರಾಜನಾಗಿದ್ದಂತಹ ತನ್ನ ಸೋದರ ಮಾವನನ್ನು ಸಂಹರಿಸಲೆಂದೇ ಜನ್ಮ ತಾಳಿರುವ ಬಗೆಗೆ ಪುರಾಣಗಳಲ್ಲಿ ಉಲ್ಲೇಖಗಳಿವೆ. ಏಕೆಂದರೆ

ಕಂಸಶೂರನು ಅಸುರನಿಗೆ ಯಾವುದೋ ಒಂದು ರಾತ್ರಿ ಅಶೀರವಾನಿಯೂ ನನ್ನ ಸೋದರಿಯ ಮಕ್ಕಳಿಂದ ನಿನಗೆ ಮರಣ ಎಂದೂ ನುಡಿದಿರುತ್ತದೆ. ಆದ್ದರಿಂದ ತನ್ನ ಸೋದರಿಯ ಗರ್ಭದಲ್ಲಿಯೇ ಆರು ಮಕ್ಕಳನ್ನು ಹತ್ಯೆ ಮಾಡಿದ್ದನು. ಆದರೆ ಏಳನೆಯ ಮಗನಾದ ಬಲರಾಮ ಮತ್ತು ಎಂಟನೆಯ ಶ್ರೀಕೃಷ್ಣನನ್ನು ಹತ್ಯೆಗೈಯಲು ಸಾಧ್ಯವೇ ಆಗಿರುವುದಿಲ್ಲ. ಏಕೆಂದರೆ ಬಲರಾಮನು ಗರ್ಭಾವಸ್ಥೆಯಲ್ಲಿ ತನ್ನ ತಾಯಿಯ ಗರ್ಭದಿಂದ ಮತ್ತೊಂದು ಗರ್ಭಕ್ಕೆ ಸೇರಿಕೊಂಡು ಜನಿಸಿರುತ್ತಾನೆ. ಶ್ರೀಕೃಷ್ಣನ ಜನನವು ಕಾರಾಗೃಹದಲ್ಲಿ ಆಗಿರುತ್ತದೆ. ಹಾಗಾಗಿಯೇ ಕಂಸಶೂರ ಅಸುರನಿಗೆ ಇದರ ಬಗೆಗೆ ಮಾಹಿತಿ ಇರುವುದಿಲ್ಲ. ಶ್ರೀಕೃಷ್ಣ ಬೆಳೆದು ದೊಡ್ಡವನಾಗಿ ಕಂಸನನ್ನು ಸಂಹರಿಸುತ್ತಾನೆಂದು ವೈಷ್ಣವ ಪಂಥದವರ ಪ್ರಬಲವಾಗಿರುವ ನಂಬಿಕೆಯೇ ಆಗಿರುತ್ತದೆ.

**ಕಲ್ಕಿ ಅವತಾರ –** ಮಹಾವಿಷ್ಣುವಿನ ಹತ್ತನೆಯ ಅಥವಾ ದಶಾವತಾರವೇ ಕಲ್ಕಿಯಾಗಿರುತ್ತದೆ.ವೈದಿಕ ಧರ್ಮದಲ್ಲಿ ಕಲ್ಕಿ ಎಂದರೆ ವಿಧ್ವಂಸಕ ಎಂಬಂತಹ ಅರ್ಥವೂ ಕೂಡ ಬರುತ್ತದೆ. ಕಲ್ಕಿಯು ಶಾಶ್ವತತೆಯ ಬಿಳಿ ಬಣ್ಣದ ಕುದುರೆಯ ಮೇಲೆ ಸಂಚರಿಸುತ್ತಾನೆ. ಈತನು ಕಲಿಯುಗದಲ್ಲಿ ಅವತರಿಸಿರುತ್ತಾನೆ. ಭೂಲೋಕದಲ್ಲಿನ ಕಲಿಯುಗದಲ್ಲಿ ಬರುವಂತಹ ಅಧರ್ಮವನ್ನು ಸಂಪೂರ್ಣವಾಗಿ ನಾಶಪಡಿಸುವ ಪಾತ್ರದಲ್ಲಿ ಹೆಚ್ಚು ಚಾಲ್ತಿಯಲ್ಲಿರುತ್ತಾನೆ ಎಂದು ವೈದಿಕ ಪುರಾಣ ಗ್ರಂಥಗಳಲ್ಲಿ ಉಲ್ಲೇಖಿಸಲಾಗಿರುತ್ತದೆ.

ಹೀಗೆ; ಮಹಾವಿಷ್ಣುವೂ ಭೂಲೋಕದಲ್ಲಿ ಅಧರ್ಮವನ್ನು ನಾಶಮಾಡಿ ಸಧರ್ಮವನ್ನು ಪುನರ್ ಸ್ಥಾಪಿಸಲು ಹಾಗೂ ಹಿಂಸಾವಾದಿಗಳನ್ನು ಸಂಹರಿಸಿ, ಅಹಿಂಸಾವಾದವನ್ನು ಚಾಲ್ತಿಗೆ ತರಲು ಕಾಲಾನುಕ್ರಮದಲ್ಲಿ ದಶಾವತಾರಗಳನ್ನು ತಳೆದು ಬಂದು ಹೋಗಿರುವುದನ್ನು ಇಂದಿಗೂ ಭಾರತ ದೇಶದಲ್ಲಿ ಹಾಗೂ ಅದರಲ್ಲಿಯೂ ಕರ್ನಾಟಕ ರಾಜ್ಯದಲ್ಲಿನ ಹಾಗೂ ಬಹುಮುಖ್ಯವಾಗಿ ಅಧ್ಯಯನದ ವ್ಯಾಪ್ತಿಯ ಹಾಗೂ ಕೇಂದ್ರ ವಸ್ತುವಿಷಯವೇ ಆಗಿರುವಂತಹ ಹಾಸನ ಜಿಲ್ಲೆಯ ವೈಷ್ಣವ ಪಂಥದವರ ಮಹತ್ವದ ನಂಬಿಕೆಯೇ ಆಗಿದೆ. ಅದು ಇಂದಿಗೂ ಕೂಡ ಉಳಿದುಕೊಂಡು ಬಂದಿರುವುದನ್ನು ಕ್ಷೇತ್ರಕಾರ್ಯದಲ್ಲಿ ಪ್ರತ್ಯೇಕದರ್ಶಿಯಾಗಿ ಗುರುತಿಸಲಾಗಿದೆ ಎಂದೇ ಹೇಳಬಹುದು.

**ಗ್ರಂಥಋಣ**


1. ಮೈಸೂರು ಜಿಲ್ಲಾ ಗ್ಯಾಸೆಟಿಯರ್, 1988
2. ಕರ್ನಾಟಕ ರಾಜ್ಯ ಗ್ಯಾಸೆಟಿಯರ್, 2010
3. ಕೆ.ಎನ್.ಅಶ್ವತ್ಥಪ್ಪ, ಸಮಗ್ರ ಕರ್ನಾಟಕ ಇತಿಹಾಸ (ಆರಂಭದಿಂದ ಕ್ರಿ.ಶ. 2017ರವರೆಗೆ), 2017
4. ಅನಂತ ರಂಗಾಚಾರ್.ಎನ್, ಕರ್ನಾಟಕದ ಶಾಸನಗಳು, 1996
5. ಚಿದಾನಂದ ಮೂರ್ತಿ. ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, 2008
6. ಕನ್ನಡ ವಿಷಯ ವಿಶ್ವಕೋಶ, ಸಂಪುಟ – 1, 1988
7. ಕನ್ನಡ ವಿಷಯ ವಿಶ್ವಕೋಶ – ಸಂಪುಟ 1, 2005
8. Vaswani J.P. – Dasavatara, the Ten incarnation of Lord Vishnu, Jaico Publishing House, Mumbai, 2018
9. Piyusha V R – Dashavatara Stories of Lord Vishnu, Kurious Kind Media Pvt. Ltd., New Delhi, 2019
10. Sundari Venkaraman, Varsha: The third Avatar (Dashavatar), Plamine Sun, Meghung, 2018